ತುಂಗಾ ತರಂಗ
ಪುಟ 2
facebook/ Tunga Taranga Gajendra Swamy
twitter/ TarangaTunga
ಶನಿವಾರ, ಮಾರ್ಚ್, 13, 2021

## ಮಾ.15ರಿಂದ ಅಂತರಘಟ್ಟಮ್ಮ ದೇವಿ ಜಾತ್ರಾ ಮಹೋತ್ಸವ

ಶಿವಮೊಗ್ಗ, ಮಾ.13:

ಶ್ರೀ ಅಂತರಘಟ್ಟಮ್ಮ ದೇವಿ ದೇವಸ್ಥಾನ ಸಮಿತಿ ವತಿಯಿಂದ 49ನೇ ವರ್ಷದ ಶ್ರೀ ಅಂತರಘಟ್ಟಮ್ಮ ದೇವಿ ಜಾತ್ರಾ ಮಹೋತ್ಸವವನ್ನು ಮಡಿವಾಳರ ಕೇರಿಯಲ್ಲಿ ನಿರ್ಮಿಸಿರುವ ಶ್ರೀ ಕಿರಾಳಮ್ಮ ದೇವಿಯ ಮಹಾದ್ವಾರದಲ್ಲಿ ಮಾ. 15, 16 ಮತ್ತು 19ರಂದು ನಡೆಯಲಿದೆ.

ಮಾ.15ರ ಸೋಮವಾರ ಬೆಳಗ್ಗೆ 10ಕ್ಕೆ ಮಹಾಭಿಷೇಕ, ಅಷ್ಟೋತ್ತರ, ಬಿಲ್ವಾರ್ಚನೆ ಸೇರಿದಂತೆ ವಿವಿಧ ಪೂಜಾ ಕಂಕ್ರ್ಯಗಳು ಜರುಲಿದೆ.

ಮಾ.16ರ ಮಂಗಳವಾರ ಬೆಳಗ್ಗೆ 7ಕ್ಕೆ ತುಂಗಾನದಿಯಲ್ಲಿ ಗಂಗಾಪೂಜೆ ನಂತರ ನಡುಮ ಡಿಯ ಮೇಲೆ ಗಾಂಧಿಬಜಾರ್ ಮೂಲಕ ಮಹಾಮಂ ಟಪಕ್ಕೆ ಅಮ್ಮನವರ ಪ್ರವೇಶ ಹಾಗೂ ಕೆಂಡದಾರ್ಚನೆ ಬಳಿಕ ತೀರ್ಥಪ್ರಸಾದ ವಿನಿಯೋಗವಿರುತ್ತದೆ. ಮಾ.19ರ ಶುಕ್ರವಾರ ದೇವಿಗೆ ಪುಣ್ಯದ ಕಾರ್ಯಕ್ರಮ ಜರುಗಲಿದೆ.

## ಮಾ.16: ಸಂವಾದ ಕಾರ್ಯಕ್ರಮ

ಶಿವಮೊಗ್ಗ, ಮಾ.13:

ಸಹ್ಯಾದ್ರಿ ವಿಜ್ಞಾನ ಕಾಲೇಜು, ಮಹಿಳಾ ಸಬಲೀಕರಣ ಘಟಕ ಹಾಗೂ ಐಕ್ಯೂಎಸಿ ಸ.ವಿ.ಕಾ.ಶಿ. ಇವರ ಸಹಯೋಗದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹಿರಿಯರ ಹಿತರಕ್ಷಣೆಗಾಗಿ ಓಟ ಮತ್ತು ವಯೋವೃದ್ಧರೊಂದಿಗೆ ಸಂವಾದ ಕಾರ್ಯಕ್ರಮವನ್ನು ಮಾ.16ರ ಮಂಗಳವಾರ ಬೆಳಗ್ಗೆ 6ಕ್ಕೆ ಗೋಪಿವೃತ್ತದಿಂದ ಏರ್ಪಡಿಸಲಾಗಿದೆ.

ಅಪರ ಜಿಲ್ಲಾಧಿಕಾರಿ ಜಿ. ಅನುರಾಧ

ರಾಷ್ಟ್ರೀಯ ಶಿಕ್ಷಣ ಸಮಿತಿ ಸ್ಥಾಪಕರ ದಿನಾಚರಣೆಯಲ್ಲಿ ಟಿ.ಆರ್.ಅಶ್ವತ್ಥನಾರಾಯಣ ಶೆಟ್ಟಿ

# ಪ್ರಾಮಾಣಿಕತೆಗೆ ಇನ್ನೊಂದು ಹೆಸರೇ ರಾಷ್ಟ್ರೀಯ ಶಿಕ್ಷಣ ಸಮಿತಿ



ಶಿವಮೊಗ್ಗ, ಮಾ.13:

ಈ ಭಾಗದ ಮಹಿಳೆಯರ ಶೈಕ್ಷಣಿಕ ಶ್ರೇಯೋಭಿವೃದ್ಧಿಗಾಗಿ ಅಂದಿನ ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸೇವಕರು ಅತ್ಯಂತ ಕಷ್ಟ ಪಟ್ಟು ರಾಷ್ಟ್ರೀಯ ಶಿಕ್ಷಣ ಸಮಿತಿಯನ್ನು ಹುಟ್ಟು ಹಾಕಿದರು ಎಂದು ಅದರ ಉಪಾಧ್ಯಕ ಟಿ.ಆರ್. ಅಶ್ವತ್ಥನಾರಾಯಣ ಶೆಟ್ಟಿ ಹೇಳಿದರು.

ಅವರು ಇಂದು ನಗರದ ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯು ಆಯೋಜಿಸಿದ್ದ "ರಾಷ್ಟ್ರೀಯ ಶಿಕ್ಷಣ ಸಮಿತಿ ಸ್ಥಾಪಕರ ದಿನಾಚರಣೆ"ಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ರುದ್ರಪ್ಪನವರು, ಎಸ್.ಆರ್.ನಾಗಪ್ಪ ಶೆಟ್ಟಿ, ಗಿರಿಮಾಜಿ ರಾಜಗೋಪಾಲ ಎರಂಥಹ ಮಹನೀಯರು ಅಂದಿನ ಕಷ್ಟ ಕಾಲದಲ್ಲಿ ತಮ್ಮ ತಮ್ಮ ಜೇಬಿನಿಂದ ಹಣ ಹಾಕಿ ಮಹೋನ್ನತ ಧ್ಯೇಯವನ್ನಿಟ್ಟುಕೊಂಡು ರಾ.ಶಿ.ಸಮಿತಿಯನ್ನು ಸ್ಥಾಪಿಸಿದರು. ಇಂದು ಈ ಸಂಸ್ಥೆಯು 45ಕ್ಕೂ ಹೆಚ್ಚು ವಿದ್ಯಾ ಸಂಸ್ಥೆಗಳನ್ನು ಹೊಂದಿದ್ದು, ಇದರಲ್ಲಿ ಸುಮಾರು 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 1,700ಕ್ಕೂ ಅಧಿಕ ನೌಕರರು ಕೆಲಸ ನಿರ್ವಹಿಸುತ್ತಿದ್ದು ಅವರೆಲ್ಲರಿಗೆ ರಾಷ್ಟ್ರೀಯ ಶಿಕ್ಷಣ ಸಮಿತಿ ಆಸರೆಯಾಗಿದೆ ಎಂದು ತಿಳಿಸಿದರು.

ತಮ್ಮ ಸಂಸ್ಥೆಯ ವಿವಿಧ ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿರುವ ಅತ್ಯಂತ ಕಡು ಬಡ ವಿದ್ಯಾರ್ಥಿಗಳಿಗೆ ಕಿಂಚಿತ್ ಸಹಾಯವಾಗುವ ನಿಟ್ಟಿನಲ್ಲಿ ರಾ.ಶಿ.ಸ.ಯಿಂದ ಶಿಷ್ಯವೇತನ ನೀಡುತ್ತಿದ್ದು ಮುಂಬರುವ ವರ್ಷಗಳಲ್ಲಿ ಈ ಮೊತ್ತವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಂಸ್ಥೆ ಕಾರ್ಯಪ್ರವೃತ್ತವಾಗಿದೆ ಎಂದು ಅವರು ಮಾಹಿತಿ ನೀಡಿದರು.

ರಾಷ್ಟ್ರೀಯ ಶಿಕ್ಷಣ ಸಮಿತಿಯು ಪ್ರಾಮಾಣಿಕತೆಗೆ ಒತ್ತು ನೀಡುತ್ತಿದ್ದು ಯಾವುದೇ ನೇಮಕಾತಿ ಸಂದರ್ಭದಲ್ಲೂ ಯಾವುದೇ ವಶೀಲಿಬಾಜಿಗೆ ಒಳಗಾಗದೆ ಕೇವಲ ವಿದ್ಯಾರ್ಹತೆ, ಶೈಕ್ಷಣಿಕ ಗುಣಮಟ್ಟಗಳ ಆಧಾರಗಳ ಮೇಲೆ ಕೆಲಸ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಪ್ರಾಂಶುಪಾಲ ಪ್ರೊ.ಪಿ.ಎಸ್.ಎಂ. ಶಂಕರ್ ಅಧ್ಯಕ್ಷತೆ ವಹಿಸಿ, ರಾಷ್ಟ್ರೀಯ ಶಿಕ್ಷಣ ಸಮಿತಿಯು ನಮಗೆಲ್ಲ ಬದುಕಲು, ಸಾಮಾಜಿಕ ಸೇವೆಗೈಯಲು ಒಳ್ಳೆಯ ಅವಕಾಶವನ್ನು ಕಲ್ಪಿಸಿದೆ ಎಂದರು.

ಡಾ.ಬಾಲಕೃಷ್ಣ ಹೆಗಡೆ ರಾ.ಶಿ.ಸಮಿತಿ ನಡೆದು ಬಂದ ದಾರಿಯನ್ನು ವಿವರಿಸಿದರು. ಐಕ್ಯೂಎಸಿ ಸಂಯೋಜಕ ಡಾ.ಎ.ಪಿ.ಓಂಕಾರಪ್ಪ, ಉಪನ್ಯಾಸಕರಾದ ಆರಡಿ ಮಲ್ಲಯ್ಯ ಮೊದಲಾದವರಿದ್ದರು. ಕು.ಮೇಘನಾ ಎಸ್.ಬಿ. ಸ್ವಾಗತಿಸಿದರು. ಶುಭಾ ಪೈ ವಂದಿಸಿದರು. ಸ್ವಾತಿ ಎಸ್.ಡಿ.ಕಾರ್ಯಕ್ರಮ ನಿರ್ವಹಿಸಿದರು.









ಜೆಸಿಐ ಶಿವಮೊಗ್ಗ ಚಂದನ ಹಾಗೂ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶೈಕ್ಷಕ ಸಂಘ (KRMSS)ಗಳ ವತಿಯಿಂದ ಶಿಕಾರಿಪುರದಲ್ಲಿ ಪದವಿ ಕಾಲೇಜುಗಳ ಅರ್ಹ ಅತಿಥಿ ಉಪನ್ಯಾಸಕರಿಗೆ ದಿನಸಿ ಕಿಟ್ ವಿತರಿಸಲಾಯಿತು. ದಾನಿಗಳಾದ ಪ್ರಮಿಳಾಬಾಯಿ ಜೆಸಿಐ ಚಂದನದ ಅಧ್ಯಕ್ಷ ಮಧುಕೇಶ್ವರ, ಗಜೇಂದ್ರ, ಡಾ.ಬಾಲಕೃಷ್ಣ ಹೆಗಡೆ, ಪತ್ರಕರ್ತ ಜಿ.ಕೆ.ಹೆಬ್ಬಾರ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ
ಸೋಮವಾರ 16.8.2021

## ಸಣ್ ಸುದ್ದಿ



ಶಿವಮೊಗ್ಗ ನಗರದ ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನಲ್ಲಿ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ನಿಮಿತ್ತ ಪ್ರಾಂಶುಪಾಲರಾದ ಡಾ. ಎಚ್. ಎಸ್. ನಾಗಭೂಷಣ ಧ್ವಜಾರೋಹಣವನ್ನು ನೆರವೇರಿಸಿದರು. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2020 ಅನ್ವಯ ರಾಜ್ಯ ಇತಿಹಾಸ ಪಠ್ಯಕ್ರಮ ರಚನಾ ಸಮಿತಿಯ ಸದಸ್ಯರಾಗಿ ನೇಮಕಗೊಂಡ ಕಾಲೇಜಿನ ಡಾ.ಬಾಲಕೃಷ್ಣ ಹೆಗಡೆ ಅವರನ್ನು ಸನ್ಮಾನಿಸಲಾಯಿತು. ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಆರ್.ಎಂ.ಜಗದೀಶ, ಉಪನ್ಯಾಸಕರಾದ ನಾಗರಾಜಕುಮಾರ, ವಿದ್ಯಾಶ್ರೀ ಈಡಿಗ, ಎನ್.ಡಿ.ರಮೇಶ, ವಿಜಯಲಕ್ಷ್ಮೀ, ಶಶಾಂಕ ಮತ್ತಿತರರಿದ್ದರು.



## ಗಾಂಧೀಜಿಗೆ ಕಸ್ತೂರಬಾ ಬೆನ್ನೆಲುಬಾಗಿದ್ದರು



**ಶಿವಮೊಗ್ಗ, ಜೂ.29:**
ಮಹಾತ್ಮಾ ಗಾಂಧೀಜಿಯವರು ತಮ್ಮ ಸತ್ಯ, ಅಹಿಂಸಾ, ತ್ಯಾಗಗಳ ಮೂಲಕ ಜಗತ್ಪ್ರಸಿದ್ಧರಾಗಲು ಅವರಿಗೆ ಬೆನ್ನೆಲುಬಾಗಿ ನಿಂತವರು ಅವರ ಪತ್ನಿ ಕಸ್ತೂರಬಾ ಗಾಂಧಿ ಆಗಿದ್ದರು ಎಂದು ಕಮಲಾ ನೆಹರು ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ.ಪಾರ್ವತಮ್ಮ ಹೇಳಿದರು.

ಅವರು ಇಂದು ತಮ್ಮ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಕರ್ನಾಟಕ ಸರ್ವೋದಯ ಮಂಡಳಿಯ ಜಿಲ್ಲಾ ಶಾಖೆಗಳ ಸಂಯುಕ್ತಾಶ್ರಯದಲ್ಲಿ ಮಹಾತ್ಮಾ ಗಾಂಧೀಜಿ ಅವರ ಜನ್ಮ ಶತಮಾನೋತ್ಸವ ವರ್ಷಾಚರಣೆ ನಿಮಿತ್ತ ಆಯೋಜಿಸಿದ್ದ "ಬಾ-ಬಾಪು" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮೋಹನದಾಸ್ ಕರಮಚಂದ್ ಗಾಂಧೀ ಅವರು ಮಹಾತ್ಮಾ ಗಾಂಧೀಜಿ ಆಗುವುದರಲ್ಲಿ ಇಡೀ ಭಾರತದ ಜನತೆ ಜೊತೆಗೆ ಕಸ್ತೂರಬಾ ಗಾಂಧಿ ಅವರ ಸಂಪೂರ್ಣ ಸಹಕಾರ, ಯೋಗದಾನ ಎಲ್ಲವೂ ಇದೆ. ಆ ಕಾರಣಕ್ಕಾಗಿಯೇ ಗಾಂಧೀಜಿ ಅವರು ತಾವು ಬ್ರಿಟಿಷರ ವಿರುದ್ಧ ಹಮ್ಮಿಕೊಂಡ ವಿವಿಧ ಬಗೆಯ ಸತ್ಯಾಗ್ರಹಗಳು, ಹರತಾಳಗಳು, ಭಾರತ ಸ್ವಾತಂತ್ರ್ಯವನ್ನು ಹೊಂದಲು ಸಹಕಾರಿಯಾಯಿತು ಎಂದರು.

ಈ ಸಂದರ್ಭದಲ್ಲಿ ವಿಶೇಷ ಉಪನ್ಯಾಸ ನೀಡಿದ ನಿವೃತ್ತ ಉಪನ್ಯಾಸಕ ಕೆ.ಸಿ.ಸಿದ್ದಪ್ಪ ಮಾತನಾಡಿದರು.

ಸರ್ವೋದಯ ಮಂಡಳಿಯ ಜಿಲ್ಲಾಧ್ಯಕ್ಷ ಎಸ್.ಎನ್.ಈಶ್ವರಪ್ಪ ಅಧ್ಯಕ್ಷತೆ ವಹಿಸಿದ್ದರು. ಸರ್ವೋದಯ ಮಂಡಳಿಯ ಜಿಲ್ಲಾ ಗೌರವಾಧ್ಯಕ್ಷ ಪ್ರೊ.ಎಂ.ಎನ್. ಸುಂದರ ರಾಜ್, ಕಾರ್ಯದರ್ಶಿ ಪ್ರೊ.ಸತ್ಯನಾರಾಯಣ, ಮೊದಲಾದವರು ಉಪಸ್ಥಿತರಿದ್ದರು.

## ಸಣ್ ಸುದ್ದಿ

# ಲಸಿಕೆ ಕಡ್ಡಾಯ ಹಾಕಿಸಿಕೊಳ್ಳಿ

ಶಿವಮೊಗ್ಗ:ಕೊರೋನಾ ತಡೆಯಲು ಕಡ್ಡಾಯ ಲಸಿಕೆ ಹಾಕಿಸಿಕೊಳ್ಳಬೇಕುಎಂದುರಾಷ್ಟ್ರೀಯಶಿಕ್ಷಣಸಮಿತಿಯ ಉಪಾಧ್ಯಕ್ಷ ಟಿ.ಆರ್.ಅಶ್ವತ್ಥನಾರಾಯಣ ಶೆಟ್ಟಿ ಹೇಳಿದರು.

ನಗರದ ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನಲ್ಲಿಜಿಲ್ಲಾಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಇಲಾಖೆಹಾಗೂಕಾಲೇಜಿನರಾಷ್ಟ್ರೀಯಸೇವಾ ಯೋಜನೆಗಳುಸಂಯುಕ್ತವಾಗಿಆಯೋಜಿಸಿದ್ದಬೃಹತ್ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ಕೊರೋನಾದಿಂದ ಶೈಕ್ಷಣಿಕ ಕ್ಷೇತ್ರ ಸೇರಿದಂತೆ ಎಲ್ಲ ಕ್ಷೇತ್ರಗಳೂ ಹಾನಿ ಅನುಭವಿಸಿವೆ. ವಿದ್ಯಾರ್ಥಿಗಳು ದೇಶದ ಸಂಪತ್ತು. ಅದನ್ನು ಉಳಿಸಿಕೊಳ್ಳಲು ರಾಷ್ಟ್ರೀಯ ಸೇವಾ ಯೋಜನೆ ಶ್ರಮಿಸುತ್ತಿರುವುದು ಶ್ಲಾಘನೀಯ. ಹೊಸ ಶೈಕ್ಷಣಿಕ ವರ್ಷದ ಆರಂಭ, ಹಿಂದಿನ ಸೆಮಿಸ್ಟರ್ ಪರೀಕ್ಷೆಯಮುಂದುವರಿಯುವಿಕೆಎಲ್ಲಎದುರಾಗಿರುವ ಈ ಸಂದರ್ಭದಲ್ಲಿ ಲಸಿಕಾ ಅಭಿಯಾನ ಹಮ್ಮಿಕೊಂಡಿರುವುದು ಅತ್ಯುತ್ತಮ ಕೆಲಸವಾಗಿದೆ ಎಂದರು. ಈಸಂದರ್ಭಪ್ರಾಂಶುಪಾಲಪ್ರೊ.ಶಂಕರ್‌ಪಿ.ಎಂ.ಎನ್. ಅಧ್ಯಕ್ಷತೆವಹಿಸಿದ್ದರು. ಆರೋಗ್ಯ ಇಲಾಖೆ ನೋಡಲ್ ಅಧಿಕಾರಿ ಡಾ.ಉಮಾ, ಸತೀಶ್, ಕಾರ್ಯಕ್ರಮಾಧಿಕಾರಿಗಳಾದ ಡಾ.ಬಾಲಕೃಷ್ಣಹೆಗಡೆ, ಮಂಜುಳಾ, ಪ್ರಾಧ್ಯಾಪಕರಾದ ಡಾ.ಓಂಕಾರಪ್ಪ, ಡಾ.ನಾಗಭೂಷಣ,ಎನ್.ಡಿ.ರಮೇಶ್‌ಮತ್ತಿತರರಿದ್ದರು.

ಪ್ರಯತ್ನ ನಡೆಸಿದ್ದಾರೆ.

ಇವರೇ ಪಶ್ಚಿಮ ವಿಭಾಗದ ಸಂಚಾರಿ ಸಹಾಯಕ ಸಬ್ ಇನ್‌ಸ್ಪೆಕ್ಟರ್ 'ದಾನಂ'. ಮೂಲತಃ ಸಂಗೀತದ ಒಲವು ಬೆಳೆಸಿಕೊಂಡೇ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಮೂಲಕ ಪೊಲೀಸರ ಹೃದಯಲ್ಲಿಯೂಸಂಗೀತದಹೊನಲುಹರಿಯುತ್ತದೆ ಎಂದು ತೋರಿಸಿದ್ದಾರೆ. ಕೊರೋನಾ ಕುರಿತಾದ ಅರಿವನ್ನು ಸಾರ್ವಜನಿಕರಲ್ಲಿ ಮೂಡಿಸಲು ಇವರು ಪ್ರವೃತ್ತಿಯಾಗಿ ಆರಿಸಿಕೊಂಡಿದ್ದು ಗಾಯನವನ್ನು.

ತಾವು ಹಾಗೂ ಅವರ ಗುರುಗಳಾದ ಮಂಗಳಾ ಅಶೋಕ್ ಜೊತೆಯಾಗಿ ಕೋರೋನಾ ಕುರಿತಾದ ಗೀತೆಗಳನ್ನು ಬರೆದಿದ್ದಾರೆ. ಈ ಗೀತೆಗೆ ಮಂಗಳಾ

'ದಾನಂ'

ಅಶೋಕ್ ಸಂಗೀತ ಸಂಯೋಜಿಸಿದ್ದರೆ, ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದ್ದಾ ಹಾಡನ್ನು ನಗರದ ಪ್ರಮುಖ ವೃತ್ತಗಳ ಮೂಲಕ ಹಾಕುತ್ತಿದ್ದಾರೆ. ಇನ್ನು ಕೆಲವು ಗಳಲ್ಲಿ, ಮಾರುಕಟ್ಟೆಯಲ್ಲಿ ಕೇಳಿಸತ್ತಾರೆ ಹಾಡಿಗೆ ತಲೆದೂಗುತ್ತಾ ಸಾರ್ವಜನಿಕರು ಸಾರ್ಥಕ ಎನಿಸಿದೆ.

ಇದೇ ವೇಳೆ ಯೂಟ್ಯೂಬ್, ಸ ಜಾಲತಾಣದ ಮೂಲಕ ಸಾರ್ವ ತಲುಪುವ ಯತ್ನ ನಡೆಸುತ್ತಿದ್ದಾರೆ. ಇವ ಸಾಮಾಜಿಕ ಜಾಲತಾಣದಲ್ಲಿ ಸಖತ್ ರೆಸ್ಪಾ



ಶಿವಮೊಗ್ಗದ ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನಲ್ಲಿ ಜಿಲ್ಲಾಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಗಳು ಸಹಯೋಗದಲ್ಲಿ ಆಯೋಜಿಸಿದ್ದ ಕೊವಿಡ್ ಬೃಹತ್ ಲಸಿಕಾ ಅಭಿಯಾನಕ್ಕೆ ರಾಷ್ಟ್ರೀಯ ಶಿಕ್ಷಣ ಸಮಿತಿಯ ಉಪಾಧ್ಯಕ್ಷ ಟಿ.ಆರ್.ಅಶ್ವತ್ಥನಾರಾಯಣ ಶೆಟ್ಟಿ ಚಾಲನೆ ನೀಡಿದರು.

ಜ

• ಕನ್ನ

ಕೋವಿಡ
ಪಾರದ
ಕೇಂದ್ರ
ಜೀವನ
ಎಂದು
ಅಧ್ಯಕ್ಷ
ಹೋ
ಆರೋ
ನಿರೋಧ
ಸ್ಥಗಿತಗೆ
ಕಾಂಗ್ರೆಸ

ಕನ್ನಡಪ್ರಭ Wed, 30 June 2021
https://kpepaper.asianetnews.com/c/61528396

ಜನಮಾಧ್ಯಮ

# ಬಾಳಗಾರ ಶಾಲೆಯಲ್ಲಿ



**ಜನಮಾಧ್ಯಮ, ಶಿರಸಿ:** ತಾಲೂಕಿನ ಬಾಳಗಾರ ಸ.ಹಿ.ಪ್ರಾ.ಶಾಲೆಯಲ್ಲಿ 72ನೇ ಗಣರಾಜ್ಯೋತ್ಸವ ನೆರವೇರಿಸಲಾಯಿತು. ಇತಿಹಾಸತಜ್ಞ ಡಾ.ಬಾಲಕೃಷ್ಣ ಹೆಗಡೆ, ಶಾಲಾಧ್ಯಕ್ಷ ವಿನಾಯಕ ಹೆಗಡೆ, ಅನಂತ ಹೆಗಡೆ, ಗೋಪಾಲ ಹೆಗಡೆ, ಗಣಪತಿ ಹೆಗಡೆ, ಮುಖ್ಯೋಪಾಧ್ಯಾಯ ಸುರೇಶ ಹೆಗಡೆ ಮೊದಲಾದವರು ಉಪಸ್ಥಿತರಿದ್ದರು.

ಸೋಮಶೇಖರ್ ಇತರರು ಇದ್ದರು.

PS EXPRESS



ಶಿವಮೊಗ್ಗದ ಕಮಲಾ ನೆಹರೂ ಮಹಿಳಾ ಕಾಲೇಜಿನಲ್ಲಿ ನಡೆದ ಅಂಬೇಡ್ಕರ್ ಜಯಂತಿಯಲ್ಲಿ ಪ್ರಾಚಾರ್ಯೆ ಡಾ.ಕೆ.ಟಿ.ಪಾರ್ವತಮ್ಮ, ಬಾಲಕೃಷ್ಣ ಹೆಗಡೆ ಇದ್ದರು.



ಶಿವಮೊಗ್ಗ : ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕುವೆಂಪು ನಗರದ ಪಾರ್ಕಿನಲ್ಲಿ ಕಮಲಾ ನೆಹರು ಮಹಿಳಾ ಕಾಲೇಜಿನ ರಾ.ಸೇ.ಯೋಜನೆ, ಪರೋಪಕಾರಂ, ಉತ್ಕೃಷ್ಟ ಭಾರತ ಇನ್ನಿತರ ಪರಿಸರ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಗಿಡ ನೆಡುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಡಾ.ಬಾಲಕೃಷ್ಣ ಹೆಗಡೆ, ಕೆ.ವಿ.ವಸಂತಕುಮಾರ, ಶ್ರೀಧರ ಎಂ.ಎಸ್, ತ್ಯಾಗರಾಜ ಮಿತ್ಯಾಂತ, ಎಸ್.ಡಿ.ಶಾಂತಕುಮಾರ್, ಬಾಲು ನಾಯ್ಡು, ಪರಿಸರ ರಮೇಶ್, ಅಶೋಕ ಜಾಧವ್, ಭಾಗ್ವತ್, ಜಿ.ಎಲ್.ಜನಾರ್ಧನ ಮೊದಲಾದವರಿದ್ದರು.

**ಸಣ್ ಸುದ್ದಿ**

## ಇಂದು ಮಹಿಳಾ ದಿನ: ವಿಶೇಷ ಉಪನ್ಯಾಸ

ಶಿವಮೊಗ್ಗ: ನಗರದ ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನಲ್ಲಿ ಮಾ.8ರಂದು ಮಧ್ಯಾಹ್ನ 12 ಗಂಟೆಗೆಎನ್.ಎಸ್.ಎಸ್. ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಶ್ರೀ ಸದ್ಗುರು ಆಯುರ್ವೇದ ಚಿಕಿತ್ಸಾಲಯದ ಡಾ.ಚಿತ್ರಲೇಖಾ ವಿ.ಕೃಷ್ಣ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಪ್ರಾಂಶುಪಾಲರಾದಪ್ರೊ.ಪಿ.ಎಂ.ಎನ್.ಶಂಕರ್‌ಅಧ್ಯಕ್ಷತೆ ವಹಿಸುವರು. ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳಾದ ಡಾ.ಬಾಲಕೃಷ್ಣ ಹೆಗಡೆ, ಮಂಜುಳಾ ಎನ್.ಉಪಸ್ಥಿತರಿರುವರು. 'ಸ್ವಚ್ಛ ಭಾರತ-ಸಮರ್ ಇಂಟರ್ನ್‌ಶಿಪ್' ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬರಲು ಕಾರಣಕರ್ತರಾದ ವಿದ್ಯಾರ್ಥಿನಿಯರನ್ನು ಅಭಿನಂದಿಸಲಾಗುವುದು ಎಂದು ತಿಳಿಸಲಾಗಿದೆ.

ಕನ್ನಡಪ್ರಭ Mon, 08 March 2
https://kpepape

ಪಾರಂಪರಿಕ ನಡಿಗೆಯಲ್ಲಿ ಕಂಡು ಬಂದ 'ಸ್ಮಾರ್ಟ್ ಸಿಟಿ'ಅವಾಂತರದ ಕಟು ಸತ್ಯ

# ಪುರಾತನ ಕೋಟೆಗೆ ಧಕ್ಕೆ: ಸಂರಕ್ಷಣೆಗೆ ಕಾಲೇಜು ವಿದ್ಯಾರ್ಥಿನಿಯರ ಆಗ್ರಹ



ಶಿವಮೊಗ್ಗ: ನಗರ ಮಧ್ಯದ ತುಂಗಾ ನದಿ ತಟದಲ್ಲಿ ಪ್ರಖ್ಯಾತ ಶಿವಪ್ಪನಾಯಕ ಅರಮನೆಗೆ ಹೊಂದಿಕೊಂಡೇ ಇರುವ ಪುರಾತನ ಕೋಟೆ ಅವಶೇಷಗಳು "ಸ್ಮಾರ್ಟ್ ಸಿಟಿ" ಕಾಮಗಾರಿಯಲ್ಲಿ ತೀವ್ರ ಧಕ್ಕೆಗೆ ಒಳಗಾಗಿರುವುದನ್ನು ಕಂಡು ಕಮಲಾ ನೆಹರು ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿನಿಯರು ಹೌಹಾರಿದ ಘಟನೆ ನಡೆದಿದೆ.

ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಇತ್ತೀಚೆಗೆ "ಪಾರಂಪರಿಕ ನಡಿಗೆ" ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಶಿವಮೊಗ್ಗ ನಗರದಲ್ಲಿರುವ ಪಾರಂಪರಿಕ ಮೌಲ್ಯದ ಒಂದೊಂದೇ ಕಟ್ಟಡಗಳಿಗೆ ಭೇಟಿ ಕೊಡುತ್ತಾ ಕೋಟೆ ಸಮೀಪ ಹೋದಾಗ ಪುರಾತನ ಕೋಟೆ ಸಂಪೂರ್ಣ ಕುಸಿದಿದ್ದನ್ನು ಕಂಡು ವಿದ್ಯಾರ್ಥಿನಿಯರು, ಪ್ರಾಧ್ಯಾಪಕರು ಅಕ್ಷರಶಃ ದಂಗಾದರು.

ಕೆಲವು ಎಂಟು ವರ್ಷಗಳ ಹಿಂದೆ ಇದೇ ಕೋಟೆಗೆ ಹೊಂದಿಕೊಂಡೇ ಮಹಾನಗರಪಾಲಿಕೆ, ಸಣ್ಣ ನೀರಾವರಿ ಇಲಾಖೆಗಳು ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ತುಂಗಾನದಿ ತಟದಲ್ಲಿ 'ವಾಕ್ ಪಾತ್' ನಿರ್ಮಿಸುವಾಗ ಕೆಳದಿ ಅರಸರ ಕಾಲದ ಈ ಕೋಟೆಗೆ ಧಕ್ಕೆ ಬರುವ ರೀತಿಯಲ್ಲಿ ಕಾಮಗಾರಿ ಮಾಡುತ್ತಿರುವ ಸಂದರ್ಭದಲ್ಲಿ ಇತಿಹಾಸಕಾರ ಡಾ.ಬಾಲಕೃಷ್ಣ ಹೆಗಡೆ, ಖಂಡೋಬ ರಾವ್ ಮತ್ತಿತರರು ಸ್ಥಳಕ್ಕೆ ಧಾವಿಸಿ ಕೋಟೆ ಮಹತ್ವವನ್ನು ಸಂಬಂಧಿಸಿದವರಿಗೆ ತಿಳಿಸಿ ಉಳಿದಿರುವ ಕೋಟೆಯ ಅವಶೇಷಗಳು ಸಂರಕ್ಷಿಸಲ್ಪಡುವಂತೆ ಮಾಡಿದ್ದರು.

ಆದರೆ ಈಗ ಮತ್ತೆ ನೂರಾರು ಕೋಟಿ ರೂಪಾಯಿ ಸುರಿದು ನಿರ್ಮಿಸಿದ ವಾಕ್ ಪಾತನ್ನೇ ಅಗೆದು ಅಲ್ಲಿ ಸ್ಮಾರ್ಟ್ ಸಿಟಿ ಅಡಿಯಲ್ಲಿ ಸುಮಾರು ನಾಲ್ಕು ಅಡಿ ವ್ಯಾಸದ ಕುಡಿಯುವ ನೀರು ಸರಬರಾಜಿನ ಸಿಮೆಂಟ್ ಪೈಪನ್ನು ಅಳವಡಿಸುತ್ತಾ ಅಗೆದ ಮಣ್ಣನ್ನು ಕೋಟೆಯ ಎದುರಿನ 'ಮೋಟ್'ಗೆ ತುಂಬಲಾಗಿದೆ. ಶ್ರೀ ಗಣಪತಿ ದೇವಸ್ಥಾನದ ಹತ್ತಿರ ಪುರಾತನ ಕೋಟೆಗೆ ಹೊಂದಿಕೊಂಡೇ ಅದು ಹಾದು ಹೋಗುವಂತೆ ಮಾಡಿದ್ದು ಕೋಟೆಗೆ ತೀವ್ರ ಧಕ್ಕೆ ಉಂಟಾಗಿದ್ದನ್ನು ವಿದ್ಯಾರ್ಥಿನಿಯರು ಗಮನಿಸಿ ಕೆಲ ಕಾಲ ದಂಗಾದರು.

ಇತಿಹಾಸ ಸಂಶೋಧಕರೂ ಆದ ಎನ್‌ಎಸ್‌ಎಸ್‌ಕಾರ್ಯಕ್ರಮಾಧಿಕಾರಿ ಡಾ.ಬಾಲಕೃಷ್ಣ ಹೆಗಡೆ ಮಾತನಾಡಿ ಯಾವುದೇ ಪುರಾತನ ಸ್ಮಾರಕಗಳಿದ್ದರೆ ಅವುಗಳಿಂದ 300 ಅಡಿ ಅಂತರದಲ್ಲಿ ಯಾವುದೇ ಹೊಸ ಕಟ್ಟಡ ಅಥವಾ ಕಾಮಗಾರಿಗಳನ್ನು ಹಮ್ಮಿಕೊಳ್ಳುವಂತಿಲ್ಲ ಎಂಬ ನಿಯಮ ಪುರಾತನ ಸ್ಮಾರಕಗಳ ಸಂರಕ್ಷಣಾ ಕಾಯಿದೆಯಲ್ಲಿದೆ. ಪುರಾತನ ಸ್ಮಾರಕಗಳನ್ನು ಅತಿಕ್ರಮಿಸಿದಲ್ಲಿ ಅಥವಾ ಅವುಗಳಿಗೆ ಏನಾದರೂ ಧಕ್ಕೆ ತಂದಲ್ಲಿ, ಹಾನಿಮಾಡಿದಲ್ಲಿ ಈ ಕಾಯಿದೆ ರೀತ್ಯಾ ಅವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು ಎಂದಿದೆ ಎಂಬ ಮಾಹಿತಿ ನೀಡಿದರು.

ಪುರಾತತ್ವ ಇಲಾಖೆಯ ಕಣ್ಣೆದುರಲ್ಲೇ ಇಂಥಹ ಪುರಾತನ ಕೋಟೆಗೆ ಧಕ್ಕೆಯಾದರೂ ಇಲಾಖೆ ಮೌನ ವಹಿಸಿದ್ದು ಇತಿಹಾಸ ಆಸಕ್ತರಲ್ಲಿ, ಸಾರ್ವಜನಿಕರಲ್ಲಿ ಆಕ್ರೋಶ ಉಂಟುಮಾಡಿದೆ ಎಂದು ಹೇಳಿದರು. ಹಾಲಿ ಅಸ್ತಿತ್ವದಲ್ಲಿರುವ ಕೋಟೆಗೇ ಧಕ್ಕೆ ತಂದಿದ್ದಲ್ಲದೆ ಇಲ್ಲೇ 'ಸ್ಮಾರ್ಟ್ ಸಿಟಿ' ಅಡಿಯಲ್ಲಿ 16 ಕೋಟಿ ರೂಪಾಯಿ ವೆಚ್ಚದಲ್ಲಿ "ಹೆರಿಟೇಜ್ ವಾಕ್" ನಿರ್ಮಾಣ ಮಾಡಲು ಮುಂದಾಗಿದ್ದು ಯಾವ ಪುರುಷಾರ್ಥಕ್ಕೆ ಎಂದು ಅವರು ಕಿಡಿ ಕಾರಿದರು.

ಬಳಿಕ ಪುರಾತನ ಕೋಟೆಗೆ ಸ್ಮಾರ್ಟ್ ಸಿಟಿ ಹೆಸರಿನ ಕಾಮಗಾರಿಯಲ್ಲಿ ತೀವ್ರ ಧಕ್ಕೆ ಯಾಗಿದ್ದನ್ನು ಒಕ್ಕೊರಲಿಂದ ಖಂಡಿಸಿದರು. ಯಾವುದೇ ಕಾರಣಕ್ಕೂ ಈ ಪುರಾತನ ಕೋಟೆ ನಶಿಸಿ ಹೋಗದಂತೆ ತಡೆಯಲು ಇಲಾಖೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ವಿದ್ಯಾರ್ಥಿನಿಯರು ಆಗ್ರಹಿಸಿದರು.






ಶಿವಮೊಗ್ಗ ಕಮಲಾ ನೆಹರು ಮಹಿಳಾ ಕಾಲೇಜಿನಲ್ಲಿ 'ಹುತಾತ್ಮ ದಿನ' ಆಚರಿಸಲಾಯಿತು. ಗಾಂಧಿ ಸ್ಮೃತಿ, ಸರ್ವ ಧರ್ಮ ಪ್ರಾರ್ಥನೆ ಪ್ರಸ್ತುತಪಡಿಸಿ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರಾಂಶುಪಾಲರಾದ ಡಾ| ಕೆ.ಟಿ. ಪಾರ್ವತಮ್ಮ, ಎನ್.ಎಸ್.ಎಸ್.ಅಧಿಕಾರಿ ಡಾ|ಬಾಲಕೃಷ್ಣ ಹೆಗಡೆ ಮತ್ತಿತರರು ಇದ್ದರು.

ಉದಯವಾಣಿ Sun, 31 January 2021
https://epaper.udayavani.com/c/58095230

PS EXPRESS

# ಜಂಜಾಟದಿಂದ ಹೊರಬರಲು ಯೋಗ ಸಹಕಾರಿ

**ಶಿವಮೊಗ್ಗ:** ಆರೋಗ್ಯಕರ ಕುಟುಂಬದಿಂದ ಆರೋಗ್ಯಕರ ಸಮಾಜ, ದೇಶ ನಿರ್ಮಾಣ ಸಾಧ್ಯ. ಅದಕ್ಕಾಗಿ ಪ್ರತಿಯೊಬ್ಬರೂ ಪ್ರತಿ ನಿತ್ಯ ಕನಿಷ್ಠ ಅರ್ಧ ಗಂಟೆಯಾದರೂ ಯೋಗ, ಧ್ಯಾನ, ಪ್ರಾಣಾಯಾಮಕ್ಕೆ ಮೀಸಲಿಡಬೇಕು ಎಂದು ಕಮಲಾ ನೆಹರು ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಡಾ| ಕೆ.ಟಿ. ಪಾರ್ವತಮ್ಮ ಕರೆ ನೀಡಿದರು.

ಅವರು ಶುಕ್ರವಾರ ಕಮಲಾ ನೆಹರು ಕಾಲೇಜಿನ ಎನ್.ಎಸ್.ಎಸ್. ಘಟಕ ಹಾಗೂ ಕಮಲಾ ನೆಹರು ಮಹಿಳಾ ಕಾಲೇಜಿನ ವಸತಿ ನಿಲಯಗಳ ಆಶ್ರಯದಲ್ಲಿ 5ನೇ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಯೋಗ ಪ್ರಾತ್ಯಕ್ಷಿಕೆ, ಧ್ಯಾನ, ಪ್ರಾಣಾಯಾಮ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಮೊಬೈಲ್ ಕೇಂದ್ರೀಕೃತ ಜೀವನದಲ್ಲಿ ಮನುಷ್ಯ ತನ್ನ ಆರೋಗ್ಯದ



ಶಿವಮೊಗ್ಗ: ಕಮಲಾ ನೆಹರು ಕಾಲೇಜಿನಲ್ಲಿ ಯೋಗಾಸನ ಪ್ರದರ್ಶಿಸಿದ ವಿದ್ಯಾರ್ಥಿಗಳು.

ಕಡೆಗಮನಕೊಡುವುದನ್ನೇಮರೆತಿದ್ದಾನೆ. ಮೊಬೈಲ್, ಅಂತರ್ಜಾಲ ಇತ್ಯಾದಿಗಳ ಅತಿಯಾದ ಬಳಕೆಯಿಂದ ತನ್ನ ದೇಹ, ಮೆದುಳು, ನರ ನಾಡಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದಲ್ಲದೆ ತನ್ನ ಕುಟುಂಬ, ಸಮಾಜದ ಸ್ವಾಸ್ಥ್ಯವನ್ನೇ ಕೆಡಿಸುತ್ತದೆ ಎಂಬ ಸಂಗತಿಯನ್ನೇ ಮರೆತಿದ್ದಾನೆ ಎಂದ ಅವರು, ಮಾನಸಿಕ ದ್ವಂದ್ವ ಜಂಜಾಟಗಳಿಂದ ಹೊರಬರಲು ಯೋಗವೊಂದೇ ರಹದಾರಿ ಎಂದು ತಿಳಿಸಿದರು.

ಎನ್ನೆಸ್ಸೆಸ್ ಕಾರ್ಯಕ್ರಮಾಧಿಕಾ ಡಾ| ಬಾಲಕೃಷ್ಣ ಹೆಗಡೆ ಪ್ರಾಸ್ತಾವಿಕವಾ ಮಾತನಾಡಿ, ಇಡೀ ಪ್ರಪಂಚದ ಸ್ವಾಸ್ಥ್ಯ ಭಾರತದ ಕೊಡುಗೆ 'ಯೋಗ'. ನಮ್ಮ ದೇಶದಲ್ಲೇ ಹುಟ್ಟಿದ ಪ್ರತಿಯೊಬ್ಬ ಆರೋಗ್ಯಕ್ಕೆ ಅವಶ್ಯಕವಾದ ಇದನ್ನು ಇಂದು ನಮ್ಮ ದೇಶದವರಿಗಿಂದ ವಿದೇಶಿಯರುಹೆಚ್ಚಿನಸಂಖ್ಯೆಯಲ್ಲಿಮೆಚ್ಚಿ ಯೋಗವನ್ನು ಅಳವಡಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಉದಯೋನ್ಮುಖ ಯೋಗಪಟು ರಕ್ಷಿತಾ ಬಿ. ಹಾಗೂ ರಕ್ಷಿತಾ ಅವರಿಂದ ಯೋಗ, ಧ್ಯಾನ, ಪ್ರಾಣಾಯಾಮಗಳ ಪ್ರಾತ್ಯಕ್ಷಿಕೆ ನಡೆಯಿತು. ತೇಜಸ್ವಿನಿ ಎಂ. ಸ್ವಾಗತಿಸಿದರು. ಅನುಷಾ ಕೆ.ಟಿ. ವಂದಿಸಿದರು. ದೀಪಶ್ರೀ ಸಂಗಡಿಗರು ಪ್ರಾರ್ಥನೆ ಹಾಡಿದರು. ವಿದ್ಯಾ ಎಂ. ಕಾರ್ಯಕ್ರಮ ನಿರ್ವಹಿಸಿದರು.

PS EXPRESS

**ಭಯೋತ್ಪಾದನಾ ವಿರೋಧಿ ದಿನಾಚರಣೆ**

# ಯುವ ಜನತೆ ರಾಷ್ಟ್ರೀಯ ವಿಚಾರಧಾರೆಗಳಿಂದ ವಿಮುಖರಾಗುತ್ತಿದ್ದಾರೆ: ಡಾ.ಪಾರ್ವತಮ್ಮ

**ಶಿವಮೊಗ್ಗ, ಮೇ 22:-**

ದೇಶದ ಯುವಜನತೆಯಲ್ಲಿ ಭಯೋತ್ಪಾದನಾ ವಿರೋಧಿ ಮನೋಭಾವನೆಯನ್ನು ಮೂಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಇಲ್ಲಿಯ ಕಮಲಾ ನೆಹರು ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಟಿ. ಪಾರ್ವತಮ್ಮ ಕರೆನೀಡಿದರು.

ತಮ್ಮ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಷಗಳು ಜಂಟಿಯಾಗಿ ಏರ್ಪಡಿಸಿದ್ದ 'ಭಯೋತ್ಪಾದನಾ ವಿರೋಧಿ ದಿನಾಚರಣೆ'ಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬದಲಾಗುತ್ತಿರುವ ಸನ್ನಿವೇಶದಲ್ಲಿ ದೇಶದ ಯುವ ಜನತೆ ರಾಷ್ಟ್ರೀಯ ವಿಚಾರ ಧಾರೆಗಳಿಂದ ವಿಮುಖರಾಗುತ್ತಿದ್ದಾರೆ ಎಂಬ ಅಭಿಪ್ರಾಯ ಜನರಲ್ಲಿ ಮೂಡುತ್ತಿದೆ. ಜಗತ್ತಿನಲ್ಲೇ ಅತ್ಯಂತ ಶಾಂತಿಪ್ರಿಯ ದೇಶ ಎಂಬ ಹೆಗ್ಗಳಿಕೆಗೆ ನಮ್ಮ ಭಾರತ ಪಾತ್ರವಾಗಿದೆ. ಇದರಲ್ಲಿ ನಮ್ಮ ಅನೇಕ ಪೂರ್ವಜರ ಯೋಗದಾನವೂ ಇದೆ ಎಂಬುದನ್ನು




ನಾವೆಲ್ಲ ನೆನಪಿಸಿಕೊಳ್ಳಬೇಕು. ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆಯನ್ನು ಎಲ್ಲರೂ ಸೇರಿ ಮೂಲೋತ್ಪಾಟನೆ ಮಾಡಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತೀರ್ಥಹಳ್ಳಿ ತುಂಗಾ ಕಾಲೇಜಿನ ಎನ್.ಸಿ.ಸಿ.ಅಧಿಕಾರಿ ಡಾ.ಅಂಜನಪ್ಪ ಮಾತನಾಡಿ, ನಮ್ಮದು ಪ್ರಜಾಪ್ರಭುತ್ವ ದೇಶ. ಶಾಂತಿ, ಸೌಹಾರ್ದತೆಗೆ ಹೆಸರುವಾಸಿಯಾದ ದೇಶ. ಆದರೆ ಇತ್ತೀಚಿನ ವರ್ಷಗಳಲ್ಲಿ ಬೇರೆ ಬೇರೆ ಕ್ಷುಲ್ಲಕ ಕಾರಣಗಳಿಗಾಗಿ ನಮ್ಮ ದೇಶದ ಮೇಲೆ ಭಯೋತ್ಪಾದನೆಯ ಕರಿ ನೆರಳು ಬೀಳುತ್ತಿರುವುದು ನಿಜಕ್ಕೂ ಆತಂಕಕಾರಿ ವಿಷಯವಾಗಿದೆ ಎಂದು ತಿಳಿಸಿದರು.

ಮಾಜಿ ಪ್ರಧಾನಿ ದಿ.ರಾಜೀವ್ ಗಾಂಧಿ ಅವರ ಪುಣ್ಯ ತಿಥಿ ದಿನವಾದ ಇಂದು ಭಾರತ ಸರ್ಕಾರ ಹಾಗೂ ವಿಶ್ವ ವಿದ್ಯಾಲಯ ಧನ ಸಹಾಯ ಆಯೋಗದ ಸೂಚನೆಯಂತೆ ಭಯೋತ್ಪಾದನಾ ವಿರೋಧಿ ದಿನವನ್ನಾಗಿ ಆಚರಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ಪ್ರತಿಯೊಬ್ಬ ಯುವಕ/ಯುವತಿಯರಲ್ಲೂ ಇದು ನಮ್ಮ ದೇಶ, ನಮ್ಮ ನೆಲ, ಎಂಬ ಭಾವನೆ ಮೂಡಬೇಕು. ರಾಷ್ಟ್ರದ ಅಭಿವೃದ್ಧಿಗೆ ಮಾರಕವಾದ ಭಯೋತ್ಪಾದನೆಯನ್ನು ಹತ್ತಿಕ್ಕಬೇಕು ಎಂದು ಮನವಿ ಮಾಡಿಕೊಂಡರು.

ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿ ಡಾ.ಬಾಲಕೃಷ್ಣ ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿ, 1991ರಲ್ಲಿ ಅಂದಿನ ಪ್ರಧಾನಿ ರಾಜೀವ ಗಾಂಧಿ ಶ್ರೀಪೆರಂಬೂದೂರಿನಲ್ಲಿ ಹತ್ಯೆಯಾದ ಸಂದರ್ಭವನ್ನು ನೆನಪಿಸಿಕೊಂಡು ಇನ್ನು ಮುಂದು ನಮ್ಮಲ್ಲಿ ಇಂಥ ಘಟನೆಗಳು ನಡೆಯಕೂಡದು. ಭಯೋತ್ಪಾದಕರ ಅಟ್ಟಹಾಸಗಳಿಗೆ ಪ್ರಾಣ ತೆತ್ತಸಾವಿರಾರು ದೇಶಭಕ್ತರಿಗೆ ಶ್ರದ್ಧಾಂಜಲಿ ಸಲ್ಲಿಸುವ ಹಿನ್ನೆಲೆಯಲ್ಲಿ ಇಂಥ ಕಾರ್ಯಕ್ರಮಗಳು ಪ್ರಯೋಜನಕಾರಿ ಎಂದು ತಿಳಿಸಿದರು.

ಕಚೇರಿ ಅಧೀಕ್ಷಕ ವಿಶ್ವಕುಮಾರ, ಸಿ.ವಿ.ಸತ್ಯಮೂರ್ತಿ, ವಸಂತಕುಮಾರಿ, ಪೂಜಾ ಎಂ.ಮೊದಲಾದವರಿದ್ದರು.






# ರಾಷ್ಟ್ರೀಯ ಶಿಕ್ಷಣ ಸಮಿತಿ ಪ್ರಾಮಾಣಿಕತೆಗೆ ಆದ್ಯತೆ

## ಕಮಲಾ ನೆಹರು ಕಾಲೇಜಿನಲ್ಲಿ ಸಂಸ್ಥಾಪಕರ ದಿನಾಚರಣೆಯಲ್ಲಿ ಉಪಾಧ್ಯಕ್ಷ ಟಿ.ಆರ್. ಅಶ್ವತ್ಥನಾರಾಯಣ ಶೆಟ್ಟಿ ಅಭಿಮತ

• **ಕನ್ನಡಪ್ರಭ ವಾರ್ತೆ ಶಿವಮೊಗ್ಗ**

ಉದಾತ್ತ ಉದ್ದೇಶದಿಂದ ಸ್ಥಾಪಿತವಾದ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯು ಬಡವಿದ್ಯಾರ್ಥಿಗಳಿಗೆ ಸಂಸ್ಥೆಯ ವಿವಿಧ ಶಾಲೆಗಳಲ್ಲಿ ಶಿಷ್ಯವೇತನ ನೀಡಿ ಶಿಕ್ಷಣಕ್ಕೆ ನೆರವಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಿನ ಮೊತ್ತವನ್ನು ಇದಕ್ಕಾಗಿ ಮೀಸಲಿಡಲಾಗುವುದು ಎಂದು ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಟಿ.ಆರ್.ಅಶ್ವತ್ಥನಾರಾಯಣ ಶೆಟ್ಟಿ ಹೇಳಿದರು.

ನಗರದ ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯು ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಣ ಸಮಿತಿ ಸ್ಥಾಪಕರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಮಲೆನಾಡು ಭಾಗದ ಮಹಿಳೆಯರ ಶೈಕ್ಷಣಿಕ ಶ್ರೇಯೋಭಿವೃದ್ಧಿಗಾಗಿ ಅಂದಿನ ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸೇವಕರು ಅತ್ಯಂತ ಕಷ್ಟಪಟ್ಟು ರಾಷ್ಟ್ರೀಯ ಶಿಕ್ಷಣ ಸಮಿತಿಯನ್ನು ಹುಟ್ಟುಹಾಕಿದರು. ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್. ರುದ್ರಪ್ಪ ಅವರು, ಎಸ್.ಆರ್. ನಾಗಪ್ಪ ಶೆಟ್ಟಿ, ಗಿರಿಮಾಜಿ ರಾಜಗೋಪಾಲ ಅವರಂತಹ ಮಹನೀಯರು ಅಂದಿನ ಕಷ್ಟಕಾಲದಲ್ಲಿ ತಮ್ಮ ಸ್ವಂತ ಹಣ ಹಾಕಿ ಈ ಸಂಸ್ಥೆಯನ್ನು ಸ್ಥಾಪಿಸಿದರು.



ಶಿವಮೊಗ್ಗದ ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯು ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಣ ಸಮಿತಿ ಸ್ಥಾಪಕರ ದಿನಾಚರಣೆಯಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಟಿ.ಆರ್.ಅಶ್ವತ್ಥನಾರಾಯಣ ಶೆಟ್ಟಿ ಮಾತನಾಡಿದರು.

ಇಂದು ಈ ಸಂಸ್ಥೆಯು 45ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಸುಮಾರು 25 ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ ಎಂದು ಹೇಳಿದರು.

ರಾಷ್ಟ್ರೀಯ ಶಿಕ್ಷಣ ಸಮಿತಿಯು ಪ್ರಾಮಾಣಿಕತೆಗೆ ಒತ್ತು ನೀಡುತ್ತಿದೆ. ಯಾವುದೇ ನೇಮಕಾತಿ ಸಂದರ್ಭದಲ್ಲೂ ಯಾವುದೇ ವಶೀಲಿಬಾಜಿಗೆ ಒಳಗಾಗದೇ ಕೇವಲ ವಿದ್ಯಾರ್ಹತೆ, ಶೈಕ್ಷಣಿಕ ಗುಣಮಟ್ಟಗಳ ಆಧಾರಗಳ ಮೇಲೆ ಕೆಲಸ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಪ್ರಾಂಶುಪಾಲ ಪ್ರೊ. ಪಿ.ಎನ್.ಎಂ. ಶಂಕರ್ ಅಧ್ಯಕ್ಷತೆ ವಹಿಸಿ, ರಾಷ್ಟ್ರೀಯ ಶಿಕ್ಷಣ ಸಮಿತಿ ನಮಗೆಲ್ಲ ಬದುಕಲು, ಸಾಮಾಜಿಕ ಸೇವೆಗೈಯಲು ಒಳ್ಳೆಯ ಅವಕಾಶವನ್ನು ಕಲ್ಪಿಸಿದೆ.

ಅದರ ಸದುಪಯೋಗವನ್ನು ಎಲ್ಲರೂ ಪಡೆದುಕೊಂಡು ರಾಷ್ಟ್ರೀಯ ಶಿಕ್ಷಣ ಸಮಿತಿಯ ಸದಾಶಯಗಳನ್ನು ಈಡೇರಿಸುವತ್ತ ಗಮನ ಹರಿಸಬೇಕು ಎಂದು ಕರೆ ನೀಡಿದರು. ಎನ್ಎಸ್ಎಸ್ ಕಾರ್ಯಕ್ರಮಾಧಿಕಾರಿ ಡಾ. ಬಾಲಕೃಷ್ಣ ಹೆಗಡೆ ರಾ.ಶಿ. ಸಮಿತಿ ನಡೆದು ಬಂದ ದಾರಿಯನ್ನು ವಿವರಿಸಿದರು. ಐಕ್ಯೂಎಸಿ ಸಂಯೋಜಕ ಡಾ. ಎ.ಪಿ.ಓಂಕಾರಪ್ಪ, ಉಪನ್ಯಾಸಕರಾದ ಆರ್.ಡಿ. ಮಲ್ಲಯ್ಯ ಮೊದಲಾದವರಿದ್ದರು.

ಕಾರ್ಯಕ್ರಮದಲ್ಲಿ ಮೇಘನಾ ಎಸ್.ಬಿ. ಸ್ವಾಗತಿಸಿದರು. ಎಸ್.ಡಿ. ಸ್ವಾತಿ ಕಾರ್ಯಕ್ರಮ ನಿರ್ವಹಿಸಿದರು. ಶುಭಾ ಪೈ ವಂದಿಸಿದರು.

ಸುವರ್ಣ ಸಂಭ್ರಮ
ಉದಯವಾಣಿ
1970ರಿಂದ
ನಮ್ಮ ಹೃದಯವಾಣಿ • ನಮ್ಮ ಉದಯವಾಣಿ

# ಅಂತಾರಾಷ್ಟ್ರೀಯ ವೆಬಿನಾರ್‌ಲ್ಲಿ 2 ಸಾವಿರಕ್ಕೂ ಅಧಿಕ ಪ್ರತಿನಿಧಿಗಳು ಭಾಗಿ

**ಶಿವಮೊಗ್ಗ:** ಪ್ರಪಂಚದ ಎರಡು ಸಾವಿರಕ್ಕೂ ಅಧಿಕ ಪ್ರತಿನಿಧಿಗಳು ಪಾಲ್ಗೊಂಡ ಅಂತರ್ಜಾಲದಲ್ಲಿ ನಡೆದ ಅಂತಾರಾಷ್ಟ್ರೀಯ ಅಂತರ್ ಶಿಸ್ತೀಯ ವೆಬಿನಾರ್ ರವಿವಾರ ನಡೆಯಿತು. ಈ ವೆಬಿನಾರ್‌ನಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಕುವೈತ್‌ನ ಪ್ರಧಾನ ವಿಜ್ಞಾನಿ ಡಾ| ಸಾಜಿ ಬಾಬಿ ದೇಶೀಯ ಜನರ ಅಳಲು ಹಾಗೂ ತೊಳಲಾಟ, ಸಿಂಗಾಪುರದ ಡೈಮನಶನ್ ಇಂಟರ್‌ನ್ಯಾಶನಲ್ ಕಾಲೇಜಿನ ಹಿರಿಯ ಪ್ರಾಧ್ಯಾಪಕ ಡಾ| ವಿನಯರಾಜ್ ಮೋದಿ ರಾಜವಲ್ಲಿ ಭವಿಷ್ಯದ ಪ್ರವಾಸೋದ್ಯಮ ಮತ್ತು ಆತಿಥ್ಯ ಉದ್ಯಮದ ಪುನರ್ ನಿರ್ಮಾಣದ ಕಾರ್ಯಕ್ಷಮತೆ ಕುರಿತು ವಿಶೇಷ ಉಪನ್ಯಾಸ ನೀಡಿದರು. ಈ ವೇಳೆ ಕೋವಿಡ್ 19 ಸಾಂಕ್ರಾಮಿಕ ಸೋಂಕಿನಿಂದ ಪ್ರಪಂಚದ ವಿವಿಧ ಕ್ಷೇತ್ರ ಗೊಂದಲ, ಏರಿಳಿತ ಮೊದಲಾದವುಗಳಿಂದ ಜರ್ಜರಿತರಾಗಿದ್ದು, ಆರ್ಥಿಕ, ಔದ್ಯೋಗಿಕ ಕ್ಷೇತ್ರದಲ್ಲಿ ವ್ಯತಿರಿಕ್ತ ಪರಿಣಾಮದ ಕುರಿತು ಹಾಗೂ ಇದರಿಂದ ಪಾರಾಗಲು ಅನುಸರಿಸಬೇಕಾದ ಮಾರ್ಗೋಪಾಯಗಳ ಕುರಿತು ಮಾತನಾಡಿದರು. ವೆಬಿನಾರನ್ನು ಶಿವಮೊಗ್ಗದ ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನ ಇತಿಹಾಸ ವಿಭಾಗ, ಚೆನ್ನೈನ ವನಮಾ ಕಲಾ ಮತ್ತು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು. ಕಮಲಾ ನೆಹರು ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ|ಕೆ.ಟಿ. ಪಾರ್ವತಮ್ಮ ಅಧ್ಯಕ್ಷತೆ ವಹಿಸಿದ್ದರು. ವಿಭಾಗದ ಮುಖ್ಯಸ್ಥ ಡಾ|ಆರ್.ಎಂ. ಜಗದೀಶ, ವನಮಾ ಟ್ರಸ್ಟನ ಟ್ರಸ್ಟಿ ವಿ.ಜೆ.ಪ್ರಸೂನಾ ಹಾಗೂ ವೆಬಿನಾರನ ನಿರ್ದೇಶಕ ಡಾ|ಪ್ರಭುಕುಮಾರಿ ವನಮಾ ಉಪಸ್ಥಿತರಿದ್ದರು.ಡಾ|ಬಾಲಕೃಷ್ಣ ಹೆಗಡೆ ಸಂಚಾಲಕರಾಗಿ ಈ ವೆಬಿನಾರನ್ನು ಸಂಯೋಜಿಸಿದ್ದರು.

## ಕಮಲಾ ನೆಹರು ಕಾಲೇಜು

# ಫೆ.17: ರಾ.ಸೇ.ಯೋ. ಕಾರ್ಯಕ್ರಮಗಳ ಉದ್ಘಾಟನೆ

**ಶಿವಮೊಗ್ಗ, ಫೆ.16:-**

ನಗರದ ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನಲ್ಲಿ ಫೆ.17ರ ನಾಳೆ ಮಧ್ಯಾಹ್ನ 3.15ಕ್ಕೆ ಪ್ರಸಕ್ತ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ನಡೆಯಲಿದೆ.

ಉದ್ಘಾಟಕರಾಗಿ ಶಿವಮೊಗ್ಗ ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕಾಂತರಾಜ ಕೆ.ಆರ್. ಆಗಮಿಸಲಿದ್ದು, ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾದ ಎಸ್.ಎನ್. ನಾಗರಾಜ, ಕುವೆಂಪು ವಿಶ್ವವಿದ್ಯಾಲಯದ ರಾ.ಸೇ.ಯೋ.ಕಾರ್ಯಕ್ರಮ ಸಂಯೋಜನಾಧಿಕಾರಿಗಳಾದ ಡಾ.ನಾಗರಾಜ ಪರಿಸರ ಆಗಮಿಸುವರು. ಪ್ರಾಂಶುಪಾಲರಾದ ಡಾ.ಕೆ.ಟಿ.ಪಾರ್ವತಮ್ಮ ಅಧ್ಯಕ್ಷತೆ ವಹಿಸುವರು. ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿಗಳಾದ ಡಾ.ಬಾಲಕೃಷ್ಣ ಹೆಗಡೆ, ಮಂಜುಳಾ ಎನ್.ಉಪಸ್ಥಿತರಿರುವರು.



ಗ್ರಾಮಗಳ ನಾಡು - ಸೊಗಡಿನ ಬೀಡು

ಶಿವಮೊಗ್ಗ

ಸಂಯುಕ್ತ ಕರ್ನಾಟಕ
10, ಅಕ್ಟೋಬರ್, 2019,
ಗುರುವಾರ, ದಾವಣಗೆರೆ.

## ಸ್ವಚ್ಛ ಭಾರತ–ಸಮರ್ ಇಂಟರ್ನ್‌ಶಿಪ್ ಕಾರ್ಯಕ್ರಮ

# ಕಮಲಾ ನೆಹರು ಕಾಲೇಜು ಪ್ರಥಮ



ಶಿವಮೊಗ್ಗ: ಸ್ವಚ್ಛ ಭಾರತ–ಸಮರ್ ಇಂಟರ್ನ್‌ಶಿಪ್ ಕಾರ್ಯಕ್ರಮದಲ್ಲಿ ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನ ಎನ್‌ಎಸ್‌ಎಸ್ ಘಟಕ ಅತ್ಯುತ್ತಮ ಸಾಧನೆ ಮಾಡಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿದೆ.

ಕಾರ್ಯಕ್ರಮಾಧಿಕಾರಿ ಡಾ.ಬಾಲಕೃಷ್ಣ ಹೆಗಡೆ ಅವರ ನೇತೃತ್ವದ ಎನ್‌ಎಸ್‌ಎಸ್ ಘಟಕ ಇತರ ಕಾರ್ಯಕ್ರಮಾಧಿಕಾರಿಗಳಾದ ಮಂಜುಳಾ ಮತ್ತು ವಿದ್ವಾನ್ ಮಂಜುನಾಥ ಭಟ್ ಅವರ ಸಹಾಯದೊಂದಿಗೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸ್ವಯಂ ಸೇವಕಿಯರ ಸೇವಾ ಮನೋಭಾವನೆಯಿಂದ ತಮ್ಮ ಕಾಲೇಜು ಸ್ವಚ್ಛ ಭಾರತ ಕಾರ್ಯಕ್ರಮದಲ್ಲಿ ಪ್ರಥಮ ಬಹುಮಾನಕ್ಕೆ ಭಾಜನವಾಗುವಂತಾಯಿತು.

–ಡಾ.ಕೆ.ಟಿ. ಪಾರ್ವತಮ್ಮ, ಪ್ರಾಚಾರ್ಯ

ಮಹಿಳಾ ಕಾಲೇಜನ್ನು ಆಯ್ಕೆ ಮಾಡಿದೆ ಎಂದು ಡಾ.ಗಿರಿಧರ ತಿಳಿಸಿದರು.

ಕಾರ್ಯಕ್ರಮಾಧಿಕಾರಿ ಡಾ.ಬಾಲಕೃಷ್ಣ ಹೆಗಡೆ ಮಾತನಾಡಿ, ಈ ಎಲ್ಲ ಸೇವಾ ಕಾರ್ಯಗಳನ್ನು ಮಾಡಲು ಎನ್‌ಇಎಸ್ ಆಡಳಿತ ಮಂಡಳಿ, ಪ್ರಾಂಶುಪಾಲರು, ಪ್ರಾಧ್ಯಾಪಕ ವರ್ಗ, ಎಲ್ಲಾ ಎನ್‌ಎಸ್‌ಎಸ್ ಸ್ವಯಂ ಸೇವಕಿಯರ ಸಹಕಾರವೇ ಶ್ರೀರಕ್ಷೆ ಆಯಿತು ಎಂದರು.

ಉಪಪ್ರಾಂಶುಪಾಲ ಡಾ.ಆರ್.ಎಂ. ಜಗದೀಶ, ಕಾರ್ಯಕ್ರಮಾಧಿಕಾರಿಗಳಾದ ಎನ್.ಮಂಜುಳಾ, ವಿದ್ವಾನ್ ಮಂಜುನಾಥ ಭಟ್ ಮೊದಲಾದವರು ಉಪಸ್ಥಿತರಿದ್ದರು.

ಹಿರಿಯ ಸ್ವಯಂ ಸೇವಕಿ ... ನಿರೂಪಿಸಿದರು. ಎಂ.ತೇಜಸ್ವಿನಿ ಸ್ವಾಗತಿಸಿದರು. ಕೆ.ಎಸ್ ಪೂಜಾ ವಂದಿಸಿದರು.

ಶಾಸಕರ ಕಾರ್ಯ ಶ್ಲಾಘನೀಯ: ಸಂಸದ

ವಿಜಯದಶಮಿ: ಪಥ ಸಂಚಲನ



ಶಿವಮೊಗ್ಗದ ಕಮಲಾ ನೆಹರು ಮಹಿಳಾ ಕಾಲೇಜಿನಲ್ಲಿ ಮಾಜಿ ರಾಷ್ಟ್ರಪತಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ ಶಿಕ್ಷಕರ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಪ್ರಾಂಶುಪಾಲರಾದ ಡಾ.ಕೆ.ಟಿ.ಪಾರ್ವತಮ್ಮ, ಎನ್ಎಸ್ಎಸ್ ಕಾರ್ಯಕ್ರಮಾಧಿಕಾರಿ ಡಾ.ಬಾಲಕೃಷ್ಣ ಹೆಗಡೆ, ಐಕ್ಯೂಎಸಿ ಸಂಯೋಜಕ ಡಾ. ಓಂಕಾರಪ್ಪ ಮೊದಲಾದವರಿದ್ದರು.

ಕನ್ನಡಪ್ರಭ Sun, 06 September 2020
https://kpepaper.asianetnews.com/c/5

# ಮೊಬೈಲ್‌ನಿಂದ ಮಾನವೀಯ ಮೌಲ್ಯಗಳು ನಾಶವಾಗುತ್ತಿವೆ

## ಕಮಲಾ ನೆಹರು ಕಾಲೇಜಿನ ಕಾರ್ಯಕ್ರಮದಲ್ಲಿ ಪ್ರೊ.ಕುಂದನ್ ಬಸವರಾಜ್



• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ರಾಷ್ಟ್ರೀಯ ಸೇವಾ ಯೋಜನೆ ಮನುಷ್ಯನಲ್ಲಿ ಆತ್ಮಗೌರವ ಹೆಚ್ಚಿಸುವುದರ ಜತೆ ಸಣ್ಣತನ ಹೋಗಲಾಡಿಸಿ ದೊಡ್ಡತನ ಬೆಳೆಸಿಕೊಳ್ಳಲು ಹೆಚ್ಚು ಸಹಕಾರಿ ಎಂದು ಕುವೆಂಪು ವಿವಿ: ರಾಷ್ಟ್ರೀಯ ಸೇವಾ ಯೋಜನೆಯ ಮಾಜಿ ಕಾರ್ಯಕ್ರಮಸಂಯೋಜನಾಧಿಕಾರಿ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಪ್ರೊ. ಕುಂದನ್ ಬಸವರಾಜ ಹೇಳಿದರು.

ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜಿನಲ್ಲಿ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವ ವರ್ಷಾಚರಣೆ ನಿಮಿತ್ತ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶಗಳು ಜಂಟಿಯಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮನುಕುಲಕ್ಕೆ ಮೊಬೈಲ್ ಎಂಬ ಪೆಡಂಭೂತ ಅಂಟಿಕೊಂಡಿದ್ದು, ಮನುಕುಲದ ಮೌಲ್ಯವನ್ನು ಸಂಪೂರ್ಣ ನಾಶ ಮಾಡುತ್ತಿದೆ. ಇಂಥಹ ಸಂದರ್ಭದಲ್ಲಿ ಸಮಾಜದಲ್ಲಿ ಜೊತೆಯಾಗಿ ಬಾಳುವ, ರಾಷ್ಟ್ರಪ್ರೇಮ, ರಾಷ್ಟ್ರ ಕಟ್ಟುವ, ಭಾವೈಕ್ಯತೆ ನಿರ್ಮಿಸಲು ರಾ.ಸೇ.ಯೋ. ಅತ್ಯವಶ್ಯಕವಾಗಿದೆ. ಕೌಶಲ್ಯ ಬೆಳೆಸಿಕೊಳ್ಳಲು ತಲೆ, ಮೆದುಳು, ಹೃದಯಗಳಿಕೆ ಶಿಕ್ಷಣ ಕೊಡಬೇಕು. ಕೈಗಳಿಗೆ ಕೆಲಸ ಕೊಡುವ ಶಿಕ್ಷಣ ನೀಡಬೇಕು. ಅದನ್ನೆಲ್ಲ ವನ್ನೂ ಎನ್.ಎಸ್.ಎಸ್. ಸ್ವಯಂಸೇವಕಿ ಯರಾಗಿ ಪಡೆಯಲು ಅವಕಾಶವಿದೆ ಎಂದು ಹೇಳಿದರು. ಪ್ರಾಂಶುಪಾಲ ಡಾ. ಎಚ್.ಎಸ್. ನಾಗಭೂಷಣ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮ ಅಧಿಕಾರಿ ಡಾ. ಬಾಲಕೃಷ್ಣ ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಂಜುಳಾ ಎನ್., ಡಾ. ಓಂಕಾರಪ್ಪ ಎ.ಪಿ. ಮತ್ತಿತರರು ಉಪಸ್ಥಿತರಿದ್ದರು.

# ಕೊರೋನಾ ವೈರಸ್ ವಿರುದ್ಧ ಹೆಚ್ಚಿನ ಜಾಗೃತಿ ಮೆರೆಯಿರಿ

## ಮಹಿಳೆ, ಕಾಲೇಜು ವಿದ್ಯಾರ್ಥಿಗಳ ಪಾತ್ರ ಮಹತ್ವದ್ದು: ಡಾ. ಚಿತ್ರಲೇಖಾ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಸಂಭವನೀಯ ಕೊರೋನಾ ಮೂರನೇ ಅಲೆ ತಡೆಯುವುದರಲ್ಲಿ ಮಹಿಳೆಯರು ಮತ್ತು ಕಾಲೇಜು ವಿದ್ಯಾರ್ಥಿಗಳ ಪಾತ್ರ ಬಹು ಮುಖ್ಯ ಎಂದು ಆಯುರ್ವೇದ ತಜ್ಞೆ ಡಾ. ಚಿತ್ರಲೇಖಾ ವಿ. ಕೃಷ್ಣ ಹೇಳಿದರು.

ನಗರದ ಕಮಲಾ ನೆಹರು ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯು ಆಂತರಿಕ ಗುಣಮಟ್ಟ ಭರವಸೆ ಕೋಶದ ಆಶ್ರಯದಲ್ಲಿ ರಾಷ್ಟ್ರೀಯ ಸದ್ಭಾವನಾ ದಿನದ ಅಂಗವಾಗಿ ಆನ್‌ಲೈನ್‌ನಲ್ಲಿ ಆಯೋಜಿಸಿದ್ದ ಸಂಭವನೀಯ ಕೊವಿಡ್ -19 ಮೂರನೇ ಅಲೆ ಮತ್ತು ಮಹಿಳಾ ಶಿಕ್ಷಣ ಎಂಬ ಕುರಿತು ವಿಶೇಷ ಉಪನ್ಯಾಸ ನೀಡಿದರು.



ಕೋವಿಡ್ 2ನೇ ಅಲೆ ಮುಗಿಯುತ್ತಿದ್ದಂತೆ ಸಾರ್ವಜನಿಕರು ಮೈಮರೆತು ಸಾಮೂಹಿವಾಗಿ ಹಬ್ಬ-ಹಿರಿದಿನಗಳನ್ನು ಆಚರಿಸಲಾರಂಭಿಸಿದ್ದಾರೆ. ಮಾರುಕಟ್ಟೆಯಲ್ಲಿ ಖರೀದಿ ಮತ್ತಿತರ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇದು ಕೊವಿಡ್ ಸೋಂಕಿಗೆ ಸಂಬಂಧಿಸಿದಂತೆ ಬಹಳ ಅಪಾಯಕಾರಿ ಎಂಬ ಕಳವಳ ವ್ಯಕ್ತಪಡಿಸಿದರು.

ಸಧ್ಯದ ಪರಿಸ್ಥಿತಿಯಲ್ಲಿ ಜನಜಂಗುಳಿ ಇರುವ ಕಡೆಗಳಲ್ಲಿ ಒಟ್ಟೊಟ್ಟಾಗಿ ಓಡಾಡುವುದಾಗಲೀ, ಶಾಪಿಂಗ್, ಹಬ್ಬ ಹರಿದಿನಗಳನ್ನು ಆಚರಿಸುವುದಾಗಲೀ ಮಾಡಬಾರದು. ಸರ್ಕಾರ ರೂಪಿಸಿರುವ ಕೋವಿಡ್ ನಿಯಮಾವಳಿಗಳನ್ನು ಪಾಲಿಸಬೇಕು. ಜಾಗೃತಿ ಅತ್ಯವಶ್ಯಕ. ಸ್ವಲ್ಪ ಎಚ್ಚರ ತಪ್ಪಿದರೂ ಪರಿಣಾಮ ಬೇರೆಯದೇ ರೀತಿಯದ್ದಾಗಿರುತ್ತದೆ. ಜನರು ಇದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಸಲಹೆ ನೀಡಿದರು.

ಪ್ರತಿದಿನ ಕನಿಷ್ಟ 15-30 ನಿಮಿಷಗಳ ಕಾಲ ಶಾರೀರಿಕ ವ್ಯಾಯಾಮ, ಧ್ಯಾನ, ಪ್ರಾಣಾಯಾಮ ಮಾಡುವ ಹವ್ಯಾಸ ಬೆಳೆಸಿಕೊಳ್ಳುವುದರ ಮೂಲಕ ಕೊರೊನಾದಿಂದ ದೂರ ಇರಬಹುದಲ್ಲದೆ, ಮಾನಸಿಕ ಖಿನ್ನತೆ, ಆತಂಕ, ಭಯದಿಂದಲೂ ದೂರ ವಿರಬಹುದು ಎಂದು ವಿವರಿಸಿದರು.

ಆಹಾರ ಪದ್ಧತಿಯಿಂದ ಕೋವಿಡ್ ಮಾರಿ ತಡೆಯಬಹುದಾಗಿದ್ದು, ನಿಯಮಿತ ಹಾಲು ಸೇವನೆ ದೇಹದಲ್ಲಿ ಪೌಷ್ಟಿಕಾಂಶ ವೃದ್ಧಿಗೆ ತುಂಬಾ ಉಪಯುಕ್ತ. ಶುದ್ಧ ಅರಿಶಿಣ, ಹಾಲು ಆರೋಗ್ಯ ವೃದ್ಧಿಗೆ ರಾಮ ಬಾಣವಾಗಿದೆ. ಇವುಗಳನ್ನು ಮಿತವಾಗಿ ಸೇವನೆ ಮಾಡಬೇಕು. ಈಗಿನ ಮಕ್ಕಳು ಹಾಲು ಕುಡಿಯುದೆಂದರೆ ಅದೊಂದು ಹಳೆ ಪದ್ಧತಿ ಎಂದು ತಾತ್ಸಾರ ಮಾಡುತ್ತಿದ್ದಾರೆ. ಹಾಗೆ ಮಾಡಬಾರದು, ಕೊರೊನಾ ಬಗ್ಗೆ ಅಸಡ್ಡೆ ಬೇಡ ಎಂದು ಅವರು ಎಚ್ಚರಿಸಿದರು.

ಪ್ರಾಂಶುಪಾಲ ಡಾ. ಎಚ್.ಎಸ್. ನಾಗಭೂಷಣ ಅಧ್ಯಕ್ಷತೆವಹಿಸಿದ್ದರು. ಎನ್ಎಸ್ಎಸ್ ಕಾರ್ಯಕ್ರಮಾಧಿಕಾರಿ ಡಾ. ಬಾಲಕೃಷ್ಣ ಹೆಗಡೆ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಟಿ.ಎ. ಅಮೃತಾ ಸ್ವಾಗತಿಸಿದರು. ನಾಗವೇಣಿ ವಂದಿಸಿದರು.

# ಮತ್ತೆ ಮುಚ್ಚಿ ಹೋಗಿದ್ದ ಕೆರೆಗೆ ಪುನರ್‌ಜೀವ : ಪರಿಸರಾಸಕ್ತರಿಂದ ಕೆರೆಯಿಂದ ಹೂಳೆತ್ತುವ ಕಾಮಗಾರಿಗೆ ಚಾಲನೆ

**2 ಕೋಟಿ ಲೀಟರ್ ನೀರು ಸಂಗ್ರಹ, ಸುತ್ತಮುತ್ತಲ ಬೋರ್‌ವೆಲ್‌ಗಳಿಗೆ ನೀರು, ಪ್ರಾಣಿ ಪಕ್ಷಿಗಳಿಗೆ ನೀರು.ಮನಮೋಹಕ ಹಸಿರು ತಾಣ ತಾಪಮಾನ ತಗ್ಗಿಸಲು ಸಹಾಯ, ನಗರ ಸೌಂದರ್ಯ ಹೆಚ್ಚಿಸುತ್ತದೆ.**

ಶಿವಮೊಗ್ಗ : ಮುಚ್ಚಿ ಹೋಗಿದ್ದ ಕೆರೆಯನ್ನು ಮತ್ತೆ ಪುನರ್‌ಜೀವ ನೀಡುವ ಮಹತ್ತರ ಕೆಲಸವನ್ನು ಇಲ್ಲಿನ ಪರಿಸರಾಸಕ್ತರು ಆರಂಭಿಸಿದ್ದು, ಇಂದು ಹೂಳೆತ್ತುವ ಕಾಮಗಾರಿಗೆ ಚಾಲನೆ ನೀಡಿದರು.

ಮಲ್ಲಿಗೇನಹಳ್ಳಿ ವಾಜ





ಪೇಯಿ ಬಡಾವಣೆಯಲ್ಲಿರುವ ಸರ್ವೆ ನಂ.52ರ ಕ್ಯಾದಿಗೆಕಟ್ಟೆ ಕೆರೆ ಸಂಪೂರ್ಣ ಹೂಳು ತುಂಬಿಕೊಂಡಿದ್ದು, ಕೆರೆಯ ಸುಳಿವೇ ಇರಲಿಲ್ಲ. ಸುಮಾರು 8 ಎಕರೆ ವಿಸ್ತೀರ್ಣದ ಕೆರೆ ಇದಾಗಿದ್ದು, ಈಗ 2 ಎಕರೆ ಪ್ರದೇಶದಲ್ಲಿ ಕೆರೆ ಹೂಳೆತ್ತುವ ಕೆಲಸಕ್ಕೆ ಪರಿಸರಾಸಕ್ತರು ನಿರ್ಧರಿಸಿದ್ದು, ರಾಜ್ಯದಲ್ಲಿಯೇ ಒಂದು ಮಾದರಿ ಕೆರೆಯನ್ನಾಗಿ ರೂಪಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ರೂಪಿಸಿದ್ದಾರೆ.

ಪರಿಸರಾಸಕ್ತರ ತಂಡವು ನಿಜಕ್ಕೂ ಮೆಚ್ಚುವಂತಹ ಕೆಲಸಕ್ಕೆ ಕೈ ಹಾಕಿದೆ. ಕೆರೆಗಳು ಪರಿಸರದ ಜೀವಕೋಶಗಳಿದ್ದಂತೆ. ಇವುಗಳನ್ನು ಉಳಿಸುವ ಜವಾಬ್ದಾರಿ ನಮ್ಮ ಮೇಲಿದೆ. ಈಗ ಈ ಪರಿಸರ ಪ್ರಿಯರ ತಂಡ ಕೆರೆಯ ಹೂಳು ಎತ್ತಿ ನೀರು ಸಂಗ್ರಹಣೆಗೆ ಅವಕಾಶ ನೀಡಿ ಕೆರೆಯ ಸುತ್ತಮುತ್ತ ಗಿಡ ಮರಗಳನ್ನು ಬೆಳೆಸುವ ಉದ್ದೇಶ ಹೊಂದಿದ್ದು, ಸಾರ್ವಜನಿಕರ ವಾಯುವಿಹಾರಕ್ಕೂ ಕೂಡ ಅನುಕೂಲಕರವಾದಂತಹ ವಾತಾವರಣವನ್ನು ನಿರ್ಮಿಸಲಿದೆ.

ಈಗಾಗಲೇ ಕೆಲವು ಪರಿಸರ ತಜ್ಞರ ಜೊತೆ ಸೇರಿಕೊಂಡು ನೀಲನಕ್ಷೆ ತಯಾರಿಸಲಾಗಿದೆ. ಮುಂದಿನ ದಿನಗಳಲ್ಲಿ ವಾಜಪೇಯಿ ಬಡಾವಣೆಯಲ್ಲಿ ನಿರ್ಮಾಣವಾಗುವ ಎಲ್ಲಾ ಮನೆಗಳ ಮೇಲ್ಛಾವಣಿಯ ಮಳೆ ನೀರು ಪೈಪುಗಳ ಮೂಲಕ ನೇರವಾಗಿ ಈ ಕೆರೆಯನ್ನು ಸೇರುವಂತೆ ಮಾಡಲಾಗುವ ಮಳೆ ಕೊಯ್ಲು ಯೋಜನೆ ಕೂಡ ಇದರ ಭಾಗವಾಗಿದೆ ಎಂದು ಪರಿಸರಾಸಕ್ತರ ತಂಡ ತಿಳಿಸಿದೆ.

ಯೋಜನೆಯ ತಜ್ಞ ಯೇಸು ಪ್ರಕಾಶ್ ಮಾತನಾಡಿ, ಕೆರೆಗೆ ಜೀವ ಕೊಡುವುದು ಮಾತ್ರವಲ್ಲ. ದೇಶದಲ್ಲಿಯೇ ಮಾದರಿ ಕೆರೆಯನ್ನಾಗಿ ರೂಪಿಸುವುದು ಇದರ ಉದ್ದೇಶ. ಶಿವಮೊಗ್ಗದ ಪರಿಸರಾಸಕ್ತರು ನಮ್ಮನ್ನು ಕೇಳಿಕೊಂಡಾಗ ನಾವು ಸಂತೋಷದಿಂದ ಒಪ್ಪಿ ಈ ಕೆಲಸಕ್ಕೆ ಕೈಹಾಕಿದ್ದೇವೆ. ಈಗಾಗಲೇ ನಾವು ಸುಮಾರು 6 ಕೆರೆಗಳನ್ನು ಈ ರೀತಿ ಜೀರ್ಣೋದ್ಧಾರ ಮಾಡಿದ್ದೇವೆ ಎಂದರು.

ಪರಿಸರಾಸಕ್ತರ ತಂಡದ ಸದಸ್ಯ ಸತೀಶ್ ಮಾತನಾಡಿ, ಕೆರೆಯ ಸುತ್ತಮುತ್ತ ಸ್ಥಳೀಯ ಸಸ್ಯ ಪ್ರಭೇದಗಳನ್ನೆ ಬೆಳೆಸಲಾಗುವುದು. ಅತ್ಯಂತ ಕಡಿಮೆ ಜಾಗದಲ್ಲಿ ಹೆಚ್ಚು ಸಸಿ ಬೆಳೆಸುವುದು ಮತ್ತು ಪರಿಸರವನ್ನು ಉತ್ತಮವಾಗಿಸುವ ಸಸ್ಯಗಳನ್ನು ಆಯ್ಕೆ ಮಾಡಿಕೊಳ್ಳುವುದು ನಮ್ಮ ಉದ್ದೇಶವಾಗಿದೆ. ಇದೊಂದು ಮಾದರಿ ಕೆರೆಯಾಗುವುದರಲ್ಲಿ ಯಾವ ಅನುಮಾನವು ಇಲ್ಲ ಎಂದರು.

ಒಟ್ಟಿನಲ್ಲಿ ಕೊರೋನಾದಂತಹ ಸಂದರ್ಭದಲ್ಲೂ ಕೂಡ ಮುಚ್ಚಿಹೋಗಿದ್ದ ಕೆರೆಯೊಂದಕ್ಕೆ ಪುನರ್‌ಜೀವ ಕೊಟ್ಟು ಪರಿಸರ ಪ್ರಜ್ಞೆಯನ್ನು ಮೂಡಿಸುವ ಮತ್ತು ಕೆರೆಗಳ ಮಹತ್ವವನ್ನು ತಿಳಿಸುವ ಇಂತಹ ಯೋಜನೆಗೆ ಕೈ ಹಾಕಿದ ಪರಿಸರಾಸಕ್ತರ ತಂಡಕ್ಕೆ ಮೆಚ್ಚುಗೆಯನ್ನು ಸೂಚಿಸಲೇಬೇಕು.

ಹೂಳೆತ್ತುವ ಕಾರ್ಯಕ್ಕೆ ಚಾಲನೆ ನೀಡುವ ಸಂದರ್ಭದಲ್ಲಿ ಪ್ರೊ.ಬಿ.ಎಂ.ಕುಮಾರಸ್ವಾಮಿ, ಪ್ರೊ.ಚಂದ್ರಶೇಖರ್, ಕಾಟನ್ ಜಗದೀಶ್, ಶ್ರೀಧರ್, ಬಾಲಕೃಷ್ಣ ನಾಯ್ಡು,ಸತೀಶ್ ಕುಮಾರ್,ತ್ಯಾಗರಾಜ್, ಪ್ರಕಾಶ್, ಮೋಹನ್, ಉಮೇಶ್ ಮೊದಲಾದವರಿದ್ದರು.